# ಮನೆ ಮಾತಾಗಬೇಕು

## ಶ್ರೀ (ನವೀನ್ ಮಹಾದೇವ್)

### ಸ್ಟಾರ್ ಸುವರ್ಣದ 'ನೀಲಿ'ಯ ವಿಷ್ಣು



★ *ನಿಮ್ಮ ಹೆಸರಿನ ವಿಶೇಷ ಏನು?*

ಈ ಮೊದಲು 'ಚಿಟ್ಟೆ ಹೆಜ್ಜೆ' ಮತ್ತು 'ಶ್ರೀರಸ್ತು ಶುಭ ಮಸ್ತು'ವಿನಲ್ಲಿ ನಟಿಸಿದ್ದೆ. ಎರಡೂ ಧಾರಾವಾಹಿಯ ಪಾತ್ರಗಳು 'ಶ್ರೀ' ಎಂದಾಗಿತ್ತು. ಇದಕ್ಕಿಂತ ಹೆಚ್ಚಾಗಿ ನನ್ನ ತಾಯಿ ಮತ್ತು ಅವರ ಬಂಧುಗಳ ಒತ್ತಾಸೆ ಕೂಡ 'ಶ' ಅಥವಾ 'ಸ' ಅಕ್ಷರದಿಂದ ಆರಂಭವಾಗುವ ಹೆಸರನ್ನು ಇಟ್ಟುಕೊಳ್ಳಬೇಕು ಎಂಬುದು. ಕಾರಣ; ನನ್ನ ಜನ್ಮ ದಿನದ ಸಂಖ್ಯಾಶಾಸ್ತ್ರದ ಪ್ರಕಾರ ಒಳ್ಳೆಯದಾಗುತ್ತದೆ ಎಂಬ ನಂಬಿಕೆ. ಇದೇ ಕಾರಣಕ್ಕೆ ನನ್ನ ಮೂಲ ಹೆಸರಿಗಿಂತ 'ಶ್ರೀ' ಎಂದೇ ಗುರುತಿಸಿಕೊಳ್ಳುತ್ತಿದ್ದೇನೆ. ನನಗೆ ಅದು ಇಷ್ಟ ಕೂಡ.

★ *ಗೊಂಬೆಯ ಜೊತೆಗಿನ ಅನುಸಂಧಾನದ ಬಗ್ಗೆ ಹೇಳುವುದಾದರೆ...*

ಅದರಲ್ಲಿ ಭಾವನೆಗಳ ಜೀವಂತಿಕೆ ಇದೆ. 'ನೀಲಿ'ನನ್ನ ಪಾಲಿಗೆ ಆಟಿಕೆಯಲ್ಲ. ಅದರಲ್ಲಿ ನನ್ನ ಮೊದಲ ಹೆಂಡತಿಯ ಆತ್ಮ ಸೇರಿದೆ. ಅದು ಅವಳ ಇಷ್ಟದ ಗೊಂಬೆ. ಅದರೊಟ್ಟಿಗೆ ನಾನು ಭಾವ ವ್ಯಾಪಾರವನ್ನು ನಿರಂತರ ಮಾಡುತ್ತೇನೆ. ಮೊದಲ ಪತ್ನಿ ಮತ್ತು ಮಗಳು ನನ್ನ ಜೀವನದಲ್ಲಿ ಮುಖ್ಯ. ಅವರನ್ನು ಬಿಟ್ಟರೆ ಜಗತ್ತಿನಲ್ಲಿ ಎಲ್ಲಾ ನಶ್ವರ. ಮೋಹದ ಹೆಂಡತಿಯ ನೆನಪೇ ನನ್ನ ಬದುಕಿನ ಬೆಳಕು. ನೀಲಿಯಲ್ಲಿ ನಾನು ನನ್ನಾಕೆಯನ್ನು ಕಾಣುತ್ತೇನೆ.

ನಾನು ಕುಟುಂಬದಲ್ಲಿ ಯಜಮಾನ. ಹೆಚ್ಚಿನ ಜವಾಬ್ದಾರಿಗಳಿವೆ. ತುಂಬಾ ಸೌಮ್ಯ ಸ್ವಭಾವದ ವ್ಯಕ್ತಿ. ಆದರೆ ನನ್ನ ಹಿಂದೆ ಪಿತೂರಿಯೊಂದು ನಡೆಯುತ್ತಿದೆ. ನನ್ನ ಮಗಳನ್ನು ಹತ್ಯೆ ಮಾಡುವ ಸಂಚನ್ನು ಎರಡನೇ ಹೆಂಡತಿ ಮಾಡುತ್ತಿದ್ದಾಳೆ. ಆದರೆ ಅದಾವುದೂ ನನ್ನ ಗಮನಕ್ಕೆ ಬಂದಿಲ್ಲ. ಒಂದು ಪಕ್ಷ ಗೊತ್ತಾದರೆ ದೊಡ್ಡ ದುರಂತವೇ ಸಂಭವಿಸುತ್ತದೆ. 'ವಿಷ್ಣು' ಎಷ್ಟು ಸೌಮ್ಯವೋ ಅಷ್ಟೇ ಉಗ್ರ ಸ್ವಭಾವದವನು.

★ *ಬಣ್ಣ ಹಚ್ಚಿದ್ದು ಹೇಗೆ?*

ನಾನು ಕ್ರಿಕೆಟ್ ಆಟಗಾರ ಆಗಬೇಕಿತ್ತು. ಅದಕ್ಕಾಗಿ ತರಬೇತಿ ತಾಲೀಮು ಮಾಡಿದ್ದೆ. ಬಹುಶಃ 15 ವರ್ಷದವನಿದ್ದಾಗ ನನ್ನ ಮನದಲ್ಲಿ ನಟನಾಗಬೇಕೆಂಬ ಆಶೆ ಚಿಗುರೊಡೆಯಿತು. ಆದರೆ ಅದನ್ನು ನಾನೂ ಎಲ್ಲೂ ಹೇಳಲಿಲ್ಲ. ಪಿಯು ಇದ್ದಾಗ ಒಮ್ಮೆ ಧೈರ್ಯ ಮಾಡಿ ಮನೆಯಲ್ಲಿ ಹೇಳಿದೆ. ಆದರೆ ಮನೆಮಂದಿಯೆಲ್ಲಾ ಹಾಸ್ಯ ಮಾಡಿದರು. 'ಫೋಟೋ ತೆಗೆಸಿಕೊಳ್ಳಲು ಸರಿಯಾಗಿ ನಿಲ್ಲಲು ಬರುವುದಿಲ್ಲ ಸಿನಿಮಾ ಮಾಡುತ್ತಾನಂತೆ' ಎಂದು ನಕ್ಕರು. ಸುಮ್ಮನೆ ಅವರ ಇಷ್ಟದಂತೆ ಬಿಇ ಮಾಡಿದೆ. ಅದಾಗಿ ಕೆಲಸವನ್ನೂ ಆರಂಭಿಸಿದೆ. ಆ ಸಂದರ್ಭದಲ್ಲಿ ನಾಟಕ ಸ್ಪರ್ಧೆಗೆಂದು ಒಂದು ಇಂಗ್ಲಿಷ್ ನಾಟಕದಲ್ಲಿ ಬಣ್ಣ ಹಚ್ಚಿದೆ. ಅದಕ್ಕೆ ಮೊದಲ ಬಹುಮಾನವೂ ಬಂತು. ಮತ್ತೆ ಅದು ನನ್ನ ಕನಸನ್ನು ಉದ್ದೀಪಿಸಿತು. ಆಮೇಲೆ ನಿರಂತರವಾಗಿ ಆಡಿಷನ್‌ಗಳಿಗೆ ಹೋಗಲು ಪ್ರಾರಂಭಿಸಿದೆ. ಕೊನೆಗೆ ಚಿಕ್ಕ ಪಾತ್ರವೊಂದರಲ್ಲಿ ನಟಿಸಿದೆ. ಅದಾದ ಮೇಲೆ 'ಚಿಟ್ಟೆಹೆಜ್ಜೆ'ಯಲ್ಲಿ ನೆಗೆಟಿವ್ ಪಾತ್ರ ನಿರ್ವಹಿಸಿದೆ. ಅದು ಸಂಪೂರ್ಣ ಧಾರಾವಾಹಿಯನ್ನೇ ಆವರಿಸಿದ ಪಾತ್ರ. ಆ ಪಾತ್ರ ನನ್ನಲ್ಲಿದ್ದ ಅಭಿನಯದ ಬಯಕೆಯನ್ನು ಈಡೇರಿಸಿತು. ಯಾವುದೇ ತರಬೇತಿ, ತರಗತಿಗಳು ಇಲ್ಲದೆ ನಿರ್ದೇಶಕರಿಂದ ಕಲಿತು ನಟನಾಗಿದ್ದೇನೆ. ಎಲ್ಲಾ ರೀತಿಯ ಪಾತ್ರಗಳಿಗೆ ಜೀವ ತುಂಬಬೇಕು. ನಾನು ಎಲ್ಲರ ಮನೆ ಮನದ ಮಾತಾಗಬೇಕು. ನನ್ನ ಬಗ್ಗೆ ಎಲ್ಲರೂ ಮಾತನಾಡುವಂತಿರಬೇಕು. ಅಂತಹ ಕಲಾವಿದ ಆಗಬೇಕು ಎಂಬ ಕನಸಿದೆ.

★ *ನಿಮ್ಮ ಮುಂದಿನ ನಡೆಯ ಬಗ್ಗೆ ಹೇಳಿ...*

ಈ ಕ್ಷೇತ್ರ ಹೊಸತು. ಹಿರಿಯ ನಟರು, ಸಹ ನಟರ ಸಹಕಾರದಿಂದ ನನ್ನ ದಾರಿಯನ್ನು ಕಂಡುಕೊಂಡಿದ್ದೇನೆ. ಮುಂದೆ ಸಿನಿಮಾದಲ್ಲಿಯೇ ನಟಿಸಬೇಕು. ಅದಕ್ಕಾಗಿ ಎಲ್ಲಾ ತಯಾರಿ ಮಾಡಿಕೊಂಡಿದ್ದೇನೆ. ವಿವಿಧ ರೀತಿಯ ಡಾನ್ಸ್ ಕಲಿತಿದ್ದೇನೆ. ತುಂಬಾ ಶ್ರಮವಹಿಸಿ ದೇಹವನ್ನು ಹುರಿಗೊಳಿಸಿದ್ದೇನೆ. ಸಿಕ್ಸ್‌ಪ್ಯಾಕ್ ಬಂದಿದೆ. ಸಾಕಷ್ಟು ಸಿನಿಮಾಗಳಲ್ಲಿ ಮಾತುಕತೆ ನಡೆದಿವೆ. ಆದರೆ ಯಾವುದೂ ಸೆಟ್ ಆಗುತ್ತಿಲ್ಲ. ಸಿನಿಮಾದಲ್ಲಿ ನಟಿಸಬೇಕು ಎಂದವನು ಮಗುವಿನ ಜೊತೆ ನಟಿಸಬೇಕು ಎಂದು ಈ ಪಾತ್ರವನ್ನು ಒಪ್ಪಿಕೊಂಡಿದ್ದೇನೆ.

■ ರಾಗು